ಪರಿಸ್ಥಿತಿ ಭೀಕರವಾಗುತ್ತದೆ, ರೈತರ ಪರವಾಗಿರುವ ಹಾಗೂ ಬರಗಾಲ ಪ್ರದೇಶಗಳ ಕಾಮಗಾರಿಗಳ ಬಗ್ಗೆ ಇರುವ ನಮ್ಮ ಹೋರಾಟವನ್ನು ನಾವು ಮುಂದುವರೆಸುತ್ತೇವೆ. ಇವತ್ತು ತಾವು ಮಧ್ಯಸ್ತಿಕೆಯನ್ನು ವಹಿಸಿ ಸರ್ಕಾರ ಹಾಗೂ ಮುಖ್ಯಮಂತ್ರಿಗಳ ಮನಸ್ಸನ್ನು ಒಲಿಸುವುದರಲ್ಲಿ ತಾವು ಹಾಗೂ ಸದನ ಯಶಸ್ವಿಯಾಗಿದೆ, ಮುಂದಾದರೂ ಕೂಡ ಸರ್ಕಾರ ವಿರೋಧಪಕ್ಷದವರು ಕೇಳುವ ಕನಿಷ್ಟ ವಿಚಾರಗಳಿಗೆ ಸ್ಪಂಧಿಸಿದರೆ ಬಹಳ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಿ ಮತ್ತೊಮ್ಮೆ, ಸಹಕಾರ, ಕಂದಾಯ ಹಾಗೂ ಸಂಸದೀಯ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಈ ಸದನದ ಕಾರ್ಯಕಲಾಪ ಮುಂದುವರೆಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಇದನ್ನು ಅನಿವಾರ್ಯವಾಗಿ ಧರಣಿ ಮಾಡಿದ್ದು, ಉದ್ದೇಶಪೂರ್ವಕವಾಗಿ ಮಾಡಿದ್ದಲ್ಲ, ಆದುದರಿಂದ ನಿಮಗೆ ವಿಶೇಷವಾಗಿ ನನ್ನ ಅಭಿನಂದನೆಗಳನ್ನು ಸಲ್ಲಿಸಿ, ನಾವು ರೈಟ್ ಟು ಪ್ರೊಟೆಸ್ಟ್ ಅನ್ನು ಸಾಲದ ಮೇಲೆ ಬಡ್ಡಿ ಮನ್ನಾ ಇತ್ಯಾದಿ ವಿಚಾರಗಳಲ್ಲಿ ಮುಂದುವರೆಸಿಕೊಂಡು ಹೋಗುತ್ತೇವೆ. ಇವತ್ತು ಉತ್ತರ ಕರ್ನಾಟಕದಲ್ಲಿ ದನಕರುಗಳ ಮೇವಿಗಾಗಿರುವ ತೊಂದರೆ, ಕೂಲಿ ಸಿಗದಿರುವ ವಿಚಾರಗಳಲ್ಲಿ ಬಹಳಷ್ಟು ಶಾಸಕರು ನೊಂದಿದ್ದಾರೆ ಹಾಗೂ ಆಡಳಿತ ಪಕ್ಷದವರೂ ಕೂಡ ನೊಂದಿದ್ದಾರೆ ಈ ಕಡೆ ಸರ್ಕಾರ ಗಮನಕೊಡಲೆಂದು ಮತ್ತೊಮ್ಮೆ ಒತ್ತಾಯ ಮಾಡಿ ಮಾನ್ಯ ಗೌರವಾನ್ವಿತ ಸದಸ್ಯರೆಲ್ಲಾ ತಮ್ಮ ಸ್ಥಾನಕ್ಕೆ ಹಿಂತಿರುಗಬೇಕೆಂದು ನಾನು ನಮ್ಮ ಹಾಗೂ ವಿರೋಧ ಪಕ್ಷದ ಮಿತ್ರರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

+ಶ್ರೀ ಸಿ. ಚೆನ್ನಿಗಪ್ಪ (ಕೊರಟಗೆರೆ) :— ಮಾನ್ಯ ಅಧ್ಯಕ್ಷರೆ, ಕೊನೆಗೂ ತಮ್ಮ ಅಧ್ಯಕ್ಷತೆಯಲ್ಲಿ ವಿರೋಧಪಕ್ಷದ ನಾಯಕರನ್ನು ಕರೆಯಿಸಿ ತಮ್ಮ ಸಂಧಾನದ ಮುಖೇನ ರಾಜ್ಯದ ಜನತೆಗೆ ಕೆಇಬಿ ಅಥವಾ ಸಾಲದ ಮೇಲಿನ ಬಡ್ಡಿ ಮನ್ನ ವಿಚಾರವಾಗಿರಬಹುದು ಅಥವಾ ತತ್ಕಾಲ್ ಯೋಜನೆಯನ್ನು ಮಾಪಸ್ ತೆಗೆದುಕೊಂಡ ವಿಚಾರವಾಗಿರಬಹುದು, ನೂರು ಕೋಟಿಗೆ ಹೆಚ್ಚಿನ ಕಾಮಗಾರಿ ಕೆಲಸ ಮಾಡುವ ವಿಚಾರವಾಗಿರಬಹುದು, ಮೆಕ್ಕೆ ಜೋಳಕ್ಕೆ ಸಂಬಂಧಿಸಿದಂತೆ ರೈತರಿಗೆ ಕೊಡಬೇಕಾದ ಹಣವನ್ನು ಸಂಪೂರ್ಣವಾಗಿ ಕೊಡುತ್ತೇವೆಂದು ಸರ್ಕಾರ ಹೇಳಿರುವುದನ್ನು ಸ್ವಾಗತ ಮಾಡುತ್ತೇವೆ. ನಾವೇನು ಧರಣಿಯನ್ನು ಮಾಡಿದ್ದೇವೆಯೋ ಅದನ್ನು ರಾಜ್ಯದ ಜನತೆಯ ಉದ್ದೇಶದಿಂದ ಮಾಡಲಾಗಿತ್ತು, ಒಂದು ಸರ್ಕಾರದ ಅಥವಾ ಪಕ್ಷದ ಧರಣಿಯಲ್ಲ. ಅದಕ್ಕೆ ಸರ್ಕಾರ ಇವತ್ತು ಉತ್ತಮವಾದ ಉತ್ತರವನ್ನು ಕೊಟ್ಟಿದೆ ಅದನ್ನು ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(3) ಪ್ರಶ್ನೋತ್ತರ

(ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಉಡುಪಿ ಜಿಲ್ಲೆಯಲ್ಲಿ ಹೊಸದಾಗಿ ಪಶುವೈದ್ಯ ಚಿಕಿತ್ಸಾಲಯಗಳನ್ನು ತೆರೆಯುವುದು.

243(1863) ಶ್ರೀ ಗೋಪಾಲ್ ಪೂಜಾರಿ ಕೆ. (ಬೈಂದೂರು) :— ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಉಡುಪಿ ಜಿಲ್ಲೆಯಲ್ಲಿರುವ ಪಶುವೈದ್ಯ ಚಿಕಿತ್ಸಾಲಯಗಳ ಸಂಖ್ಯೆ ಎಷ್ಟು? ಮತ್ತು ಎಲ್ಲೆಲ್ಲಿವೆ. (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು)

2) ಈ ಪಶುವೈದ್ಯ ಚಿಕಿತ್ಸಾಲಯಗಳಿಗೆ 1999-2000ರ ಮತ್ತು 2000-01ನೇ ಸಾಲಿನಲ್ಲಿ ಔಷಧಿ ಖರೀದಿಗಾಗಿ ಬಿಡುಗಡೆಗೊಳಿಸಿದ ಹಣ ಎಷ್ಟು? (ವಿಧಾನಸಭಾ ಕ್ಷೇತ್ರವಾರು ವಿವರ ನೀಡಿರಿ)

3) ಹೊಸ ಪಶುವೈದ್ಯ ಚಿಕಿತ್ಸಾಲಯಗಳನ್ನು ತೆರೆಯುವುದು ಸರ್ಕಾರದ ಮುಂದಿದೆಯೇ?

4) ಪಶುವೈದ್ಯ ಚಿಕಿತ್ಸಾಲಯಗಳಲ್ಲಿ ಔಷಧದ ಕೊರತೆ ಹಾಗೂ ಸಿಬ್ಬಂದಿ ಕೊರತೆಯಿಂದ ಜಾನುವಾರುಗಳಿಗೆ ಆಗುತ್ತಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :—

1) 89 ಪಶುವೈದ್ಯಕೀಯ ಸಂಸ್ಥೆಗಳು ಇವೆ.

(ವಿಧಾನಸಭಾ ಕ್ಷೇತ್ರವಾರು ವಿವರ ಅನುಬಂಧ-1ರಲ್ಲಿ ನೀಡಿದೆ)

2) ವಿಧಾನಸಭಾ ಕ್ಷೇತ್ರವಾರು ಪಶುವೈದ್ಯ ಸಂಸ್ಥೆಗಳಿಗೆ 1999-2000, 2000-01ನೇ ಸಾಲಿನಲ್ಲಿ ಔಷಧಿ ಖರೀದಿಗಾಗಿ ಬಿಡುಗಡೆ ಮಾಡಿದ ವಂಟನ ವಿವರ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ವಿಧಾನಸಭಾ ಕ್ಷೇತ್ರದ ಹೆಸರು	1999-2000	2000-01
1.	ಉಡುಪಿ	111300	260800
2.	ಬ್ರಹ್ಮಾವರ	124400	291500
3.	ಕಾಪು	78600	184200
4.	ಕುಂದಾಪುರ	209600	491000
5.	ಕಾರ್ಕಳ	229200	537000
6.	ಬೈಂದೂರು	104800	245500
	ಒಟ್ಟು	857900	2010000

3) —ಇಲ್ಲ—

4) ಸಾರ್ವಜನಿಕ ಉದ್ದಿಮೆಗಳಾದ ಕರ್ನಾಟಕ ಆಂಟಿ ಬಯಾಟಿಕ್ಸ್ ಮತ್ತು ಫಾರ್ಮಸೂಟಿಕಲ್ಸ್‌ರವರಿಂದ ಔಷದಿ ಮತ್ತು ರಸಾಯನಿಕಗಳನ್ನು ವಿಶೇಷವಾಗಿ ಖರೀದಿಸಲು ಕ್ರಮ ವಹಿಸಲಾಗುತ್ತಿದೆ. ಅಲ್ಲದೇ ಔಷದಿಗಳಿಗಾಗಿ ಹೊಸ ದರ ಗುತ್ತಿಗೆಯನ್ನು ನಿಗಧಿಪಡಿಸಲು ಕ್ರಮ ವಹಿಸಲಾಗುತ್ತಿದೆ.

ಅನುಬಂಧ - ೧

ಕ್ರ. ಸಂ.	ವಿಧಾನ ಸಭಾ ಕ್ಷೇತ್ರ	ಪಶು ಆಸ್ಪತ್ರೆ	ಪಶು ಚಿಕಿತ್ಸಾಲಯ	ಪ್ರಾಥಮಿಕ ಪಶು ಚಿಕಿತ್ಸಾಲಯ	ಸಂಚಾರಿ ಪಶು ಚಿಕಿತ್ಸಾಲಯ	ಕೃತಕ ಗರ್ಭ ಧಾರಣ ಕೇಂದ	ಒಟ್ಟು
1	2	3	4	5	6	7	8
1	ಉಡುಪಿ	ಉಡುಪಿ	೧. ಮಲ್ಪೆ ೨. ಹಿರಿಯಡ್ಕ ೩. ಮಣಿಪಾಲ	೧. ಮರಣೆ ೨. ಉದ್ಯಾವರ ೩. ಕಡೇಕಾರು ೪. ಮಣಿಪುರ ೫. ಬಡಗುಬೆಟ್ಟು	ಉಡುಪಿ	ಉಡುಪಿ	
	ಒಟ್ಟು	1	3	5	1	1	11
2	ಬ್ರಹ್ಮಾವರ	ಬ್ರಹ್ಮಾವರ	೧. ಬೈರಂಪಳ್ಳಿ ೨. ಸ್ಯಾಬರಕಟ್ಟೆ ೩. ಸಾಸ್ವಾನ ೪. ಕಲ್ಯಾಣಪುರ	೧. ಹೆಗ್ಗುಂಜಿ ೨. ಪೇತ್ರಿ ೩. ಕೊಕ್ಕರ್ಣೆ ೪. ಬಾರ್ಕೂರು ೫. ಕುಕ್ಕೆಹಳ್ಳಿ ೬. ಕಳ್ತೂರು ೭. ಕೊಳಲಗಿರಿ ೮. ಪೆಡ್ಡೂರು			
	ಒಟ್ಟು	1	4	8	-	-	13

1	2	3	4	5	6	7	8
3	ಕಾಪು	ಕಾಪು	೫. ಕಟಪಾಡಿ	೧. ಪಡುಬೆಳ್ಳೆ ೨. ಶಿರ್ವ ೩. ಮುದರಂಗಡಿ ೪. ಅದಮೂರು ೫. ಪಲಿಪಾರು ೬. ಪಡಿವಿದ್ರೆ		ಕಾಪು	
	ಒಟ್ಟು	1	1	6	-	1	9
4	ಕುಂದಾಪುರ	೧. ಕೋಟ ೨. ಕುಂದಾ-ಪುರ	೧. ಶಂಕರ-ನಾರಾಯಣ ೨. ಬೆಳ್ವೆ ೪. ಕಲ್ಯಾಣಪುರ	೧. ಹಿಲಿಯಾಣ ೨. ಕುಂಭಾಶಿ ೩. ಬಸ್ರೂರು ೪. ಕಂಡ್ಲೂರು ೫. ಸಿದ್ಧಾಪುರ ೬. ಅಂಪಾರು ೭. ಅಮಾಸೆಬೈಲು ೮. ಕಾಕಾವರ	ಕುಂದಾಪುರ	ಕುಂದಾಪುರ	
	ಒಟ್ಟು	1	4	8	-	-	13

1	2	3	4	5	6	7	8
				೯. ಗಂಗೊಳ್ಳಿ			
				೧೦. ಕೋಗ್ಗಿ			
				೧೧. ಮಂಡಿಮಾರಕ್ಕೆ			
	ಒಟ್ಟು	2	6	11	1	1	21
5	ಬೈಂದೂರು	-	೧. ಗುಲ್ಲಾಡಿ	೧. ಹೆಮ್ಮಾಡಿ		ಬೈಂದೂರು	
			೨. ಕೊಲ್ಲೂರು	೨. ನಾಡ			
			೩. ಬೈಂದೂರು	೩. ಕಿರಿಮಂಜೇಶ್ವರ			
				೪. ಕಾಲ್ತೋಡು			
				೫. ಹಳ್ಳಿಹೊಳೆ			
				೬. ಅರ್ಜಿ			
	ಒಟ್ಟು	-	3	6	-	1	10

1	2	3	4	5	6	7	8
6.	ಕಾರ್ಕಳ	೧. ಕಾರ್ಕಳ ೨. ಹೆಬ್ರಿ	೧. ನಿಟ್ಟೆ ೨. ಬೈಲೂರು ೩. ಅಜೆಕಾರು ೪. ಪಳ್ಳಿ ೫. ಬಜಗೊಳಿ	೧. ನಕ್ರೆ ೨. ಮುನಿಯಾಲು ೩. ಹೊಸ್ಮಾರು ೪. ಬೆಳ್ಮಣ್ ೫. ಬೋಳ ೬. ಶಿರ್ಲಾಲು ೭. ಸಾಣೂರು ೮. ಇರ್ವತ್ತೂರು ೯. ಶಿವಪುರ ೧೦. ಮುದ್ರಾಡಿ ೧೧. ಕಬ್ಬಿನಾಲೆ ೧೨. ಕುಚ್ಚೂರು ೧೩. ನಾಡ್ಪಾಲ್ ೧೪. ಕಲ್ಯ ೧೫. ಮಾಳ ೧೬. ಮಂಡ್ಯೂರು	ಕಾರ್ಕಳ	೧. ಕಾರ್ಕಳ	
	ಒಟ್ಟು	2	5	16	1	1	25
	ಒಟ್ಟು	7	22	52	3	5	89

1.10 ಪಿ.ಎಂ.

ಶ್ರೀ ಕೆ. ಗೋಪಾಲ ಪೂಜಾರಿ :— ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯ ಕ್ಷೇತ್ರಾವಾರು ವಿವರವನ್ನು ನೋಡಿದಾಗ ಅತ್ಯಂತ ಕಡಿಮೆ ಪ್ರಾಥಮಿಕ ಪಶು ಚಿಕಿತ್ಸಾಲಯಗಳನ್ನು ನನ್ನ ಕ್ಷೇತ್ರದಲ್ಲಿ ಪಶು ಚಿಕಿತ್ಸಾಲಯವನ್ನು ಪ್ರಾರಂಭ ಮಾಡುವುದಕ್ಕೆ ಅನುಮತಿ ಕೊಡಬೇಕೆಂದು ಒತ್ತಡ ತಂದಾಗ ಆ ಸಂದರ್ಭದಲ್ಲಿ ಒಂದೂ ಸಹ ಸಿಗಲಿಲ್ಲ. ನಂತರ ನಮ್ಮ ಸರ್ಕಾರ ಆಡಳಿತಕ್ಕೆ ಬಂದು, ಜಿಲ್ಲಾ ಪಂಚಾಯತ್‌ನಲ್ಲಿ ನಿರ್ಣಯ ಆದರೂ ಸಹ ಇಷ್ಟರತನಕ ನನ್ನ ಕ್ಷೇತ್ರಕ್ಕೆ ಪಶು ಚಿಕಿತ್ಸಾಲಯ ಪ್ರಾರಂಭ ಮಾಡುವ ಸಲುವಾಗಿ ಸರ್ಕಾರದಿಂದ ಅನುಮೋದನೆ ದೊರಕಲಿಲ್ಲ. ನನ್ನ ಕ್ಷೇತ್ರದಲ್ಲಿಯ ತ್ರಾಸಿ, ಉಪ್ಪುಂದ, ತಗ್ಗರಸೆ, ಶಿರೂರು, ಮದ್ದೂರು ಮತ್ತು ಬಿಜೂರು ಈ ಸ್ಥಳಗಳಲ್ಲಿ ಪಶು ಚಿಕಿತ್ಸಾಲಯಗಳನ್ನು ಪ್ರಾರಂಭ ಮಾಡುವುದಕ್ಕೆ ಬಹಳಷ್ಟು ಸಲ ಪ್ರಸ್ತಾವನೆ ಕೊಟ್ಟರೂ ಸಹ ಇನ್ನು ದೊರಕಿಸಿಕೊಟ್ಟಿಲ್ಲ. ಈ ಸ್ಥಳಗಳಲ್ಲಿ ಪಶು ಚಿಕಿತ್ಸಾಲಯವನ್ನು ಪ್ರಾರಂಭಿಸುವುದಕ್ಕೆ ಯಾವಾಗ ಅನುಮತಿ ಕೊಡುತ್ತೀರಿ ಮತ್ತು ಹೆಮ್ಮಾಡಿ, ನಾಡ, ಕಿರು ಮಂಜೇಶ್ವರ ಇಲ್ಲಿ ಇರುವಂಥ ಪ್ರಾಥಮಿಕ ಪಶು ಚಿಕಿತ್ಸಾಲಯವನ್ನು ಯಾವಾಗ ಅಪ್ ಗ್ರೇಡ್ ಮಾಡುತ್ತೀರಿ? ಜೊತೆಗೆ ಈ ಜಿಲ್ಲೆಯ ಕ್ಷೇತ್ರವಾರು ಸಮಾನತೆಯನ್ನು ಕಾಯ್ದುಕೊಂಡು ಭೈಂದೂರು ಮತ್ತು ಶಂಕರನಾರಾಯಣದಲ್ಲಿರುವ ಪಶು ಚಿಕಿತ್ಸಾಲಯವನ್ನು ಪಶು ಆಸ್ಪತ್ರೆಯನ್ನಾಗಿ ಕನ್‌ವರ್ಟ್ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಇನ್ನು ಉಡುಪಿ ಮತ್ತು ಕುಂದಾಪುರದಲ್ಲಿ ಪಶುವೈದ್ಯ ಆಸ್ಪತ್ರೆಯಲ್ಲಿ ದ್ವಿತೀಯ ದರ್ಜೆ ಸಹಾಯಕರು, ಗ್ರೂಪ್-ಡಿ ನೌಕರರು, ವೆಟರ್ನರಿ ಇನ್ಸ್‌ಪೆಕ್ಟರುಗಳ ಹುದ್ದೆ ಹೀಗೆ ಬಹಳಷ್ಟು ಸಿಬ್ಬಂದಿಗಳ ಕೊರತೆ ಇದ್ದು ಇವುಗಳನ್ನು ಯಾವಾಗ ಭರ್ತಿ ಮಾಡುತ್ತೀರಿ?

ಶ್ರೀ ಎ. ಕೃಷ್ಣಪ್ಪ :— ಮಾನ್ಯ ಅಧ್ಯಕ್ಷರೆ, ಹೊಸ ಪಶು ಆಸ್ಪತ್ರೆಗಳನ್ನು ಮಂಜೂರು ಮಾಡುವ ವಿಷಯ, ಇದು ಸರ್ಕಾರದ ನೀತಿಯ ವಿಚಾರವಾಗಿರುವುದರಿಂದ ಹೊಸ ಪಶು ಆಸ್ಪತ್ರೆಗಳಿಗೆ ಮಂಜೂರಾತಿ ಕೊಟ್ಟಾಗ ಅವರ ಜಿಲ್ಲೆಯ ಪ್ರಾಣಿಗಳ ಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ಮಂಜೂರಾತಿ ಕೊಡುವಂಥ ಕೆಲಸವನ್ನು ಖಂಡಿತವಾಗಿ ಮಾಡುತ್ತೇವೆಂದು ಹೇಳಬಯಸುತ್ತೇನೆ. ಹೊಸ ಪಶು ಆಸ್ಪತ್ರೆಯನ್ನು ಕೊಡುವ ವಿಚಾರ ಸಧ್ಯಕ್ಕೆ, ತಕ್ಷಣಕ್ಕೆ ಸರ್ಕಾರದ ಮುಂದೆ ಇಲ್ಲ. ಮಾನ್ಯ ಸದಸ್ಯರು ಎರಡು ಪಶು ಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೆ ಏರಿಸುವ ವಿಚಾರ ಕೇಳಿದ್ದು, 2000-2001ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ 200 ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಲಾಗಿದೆ. ಬಹುಶ: ಅವರು ಪಟ್ಟಿಯನ್ನು ಕೊಟ್ಟಿದ್ದರೆ ಆಗಲೇ ಆಗುತಿತ್ತು. ಸದರಿ ಆರ್ಥಿಕ ವರ್ಷ ಅಂದರೆ 2001-2002 ರಲ್ಲಿ ಪುನ: 200 ಪಶು ಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೆ ಏರಿಸುವಂಥ ಕೆಲಸವನ್ನು ಮಾಡುತ್ತಿದ್ದೇವೆ. ಮಾನ್ಯ ಸದಸ್ಯರಲ್ಲಿ ಪಟ್ಟಿ ಇದ್ದು ಅದನ್ನು

ನನ್ನ ಕಡೆಗೆ ಕಳುಹಿಸಿಕೊಟ್ಟರೆ ಅದನ್ನು ಕೂಡ ಮಂಜೂರಾತಿ ಮಾಡಿಸಿಕೊಡಲಾಗುವುದು. ಇನ್ನು ಪಶುವೈದೇಯ ಆಸ್ಪತ್ರೆಗಳಲ್ಲಿರುವ ಖಾಲಿ ಹುದ್ದೆಗಳ ವಿಚಾರವಾಗಿ ಹೇಳುವುದಾದರೆ ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ಖಾಲಿ ಇದ್ದಂಥ 1134 ಹುದ್ದೆಗಳನ್ನು ಹಲವಾರು ಹಂತದಲ್ಲಿ ತುಂಬಿದ್ದೇವೆ. ಆದರಲ್ಲಿ 341 ವೆಟರ್ನರಿ ಇನ್ಸ್‌ಪೆಕ್ಟರುಗಳನ್ನು, 357 ವೆಟರ್ನರಿ ಅಸಿಸ್ಟೆಂಟ್‌ಗಳು, 340 ಡಾಕ್ಟರ್‌ಗಳ ಪೈಕಿ ಸುಮಾರು 200 ಡಾಕ್ಟರ್‌ಗಳನ್ನು ತುಂಬಿದ್ದೇವೆ. ಉಳಿದ ಖಾಲಿ ಹುದ್ದೆಗಳನ್ನು ಕ್ಯಾಬಿನೆಟ್ ಮಂಜೂರಾತಿ ಕೊಟ್ಟು ಆಯಾಯ ಜಿಲ್ಲಾಧಿಕಾರಿಗಳು ತುಂಬಬೇಕೆಂದು ಆದೇಶ ಕೊಡಲಾಗಿದೆ. ಈ ಕೆಲಸ ಎಲ್ಲಾ ಜಿಲ್ಲೆಗಳಲ್ಲಿ ಆಗುತ್ತಿದೆ. ಪುನ: ಖಾಲಿ ಹುದ್ದೆಗಳು ಏನಾದರೂ ಬಾಕಿ ಉಳಿದಿದ್ದು ಅದನ್ನು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದರೆ ರೈತರ ಹಿತದೃಷ್ಟಿಯಿಂದ ಅದನ್ನೂ ಕೂಡ ತುಂಬಲಿಕ್ಕೆ ಕಟ್ಟುನಿಟ್ಟಾದಂಥ ಆದೇಶವನ್ನು ಕೊಡುತ್ತೇವೆಂದು ತಮ್ಮ ಮುಖೇನ ಹೇಳಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಕೆ. ಗೋಪಾಲ ಪೂಜಾರಿ :— ಮಾನ್ಯ ಅಧ್ಯಕ್ಷರೆ, ಪಶುವೈದ್ಯ ಚಿಕಿತ್ಸಾಲಯಗಳಿಗೆ ಕರ್ನಾಟಕ ಆಂಟಿಬಯಾಟಿಕ್ಸ್ ಮತ್ತು ಫಾರ್ಮಸೂಟಿಕಲ್ಸ್‌ನಿಂದ ಔಷಧಿಗಳನ್ನು ಸಪ್ಲೈ ಮಾಡಲಾಗುತ್ತಿದೆ ಎಂದು ಹೇಳಿದ್ದಾರೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳು ತಮಗೆ ಯಾವ ಯಾವ ಔಷಧಿಗಳು ಬೇಕೆಂದು ಇಂಡೆಂಟ್ ಹಾಕಿ ಕಳುಹಿಸಿದರೆ, ಈ ಸಂಸ್ಥೆಯಲ್ಲಿ ಏನು ಔಷಧಿ ಸ್ಟಾಕ್ ಇರುತ್ತದೆ ಅದನ್ನು ಡಂಪ್ ಮಾಡುವ ಪದ್ಧತಿಯಿಂದಾಗಿ ಅಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಬೇಕಾದಂಥ ಔಷಧಿಗಳು ದೊರೆಯದೆ ಬಹಳ ತೊಂದರೆ, ಅನ್ಯಾಯವಾಗಿದೆ. ಆದ್ದರಿಂದ ಈ ಸಂಸ್ಥೆಯಿಂದ ಸಾಕಷ್ಟು ಔಷಧಿಗಳು ಪೂರೈಕೆಯಾದರೆ ಅದನ್ನು ಪಶು ಚಿಕಿತ್ಸಾಲಯಗಳಿಗೆ ಡಂಪ್ ಮಾಡಿ ಔಷಧಿಗಳ ಕೊರತೆಯನ್ನು ನೀಗಿಸಲಿಕ್ಕೆ ಸಾಧ್ಯತೆ ಇದೆ. ಮತ್ತು ಜಿಲ್ಲಾ ಪಂಚಾಯತ್‌ನಲ್ಲಿ ಅನುದಾನವನ್ನು ಹೆಚ್ಚಿಗೆ ಕೊಟ್ಟು ಅಲ್ಲಿಂದ ಏನು ಇಂಡೆಂಟ್ ಹಾಕಿ ಕಳುಹಿಸುತ್ತಾರೆ ಅದನ್ನು ಸಪ್ಲೈ ಮಾಡಲಿಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ತಮ್ಮ ಮೂಲಕ ಹೇಳಿಕೊಳ್ಳುತ್ತೇನೆ. ಇನ್ನು ಪಶು ಚಿಕಿತ್ಸಾಲಯದಲ್ಲಿರುವಂಥ ದೂರವಾಣಿಯನ್ನು ರದ್ದು ಮಾಡಬೇಕೆಂದು ಮೊನ್ನೆತಾನೆ ಒಂದು ಆದೇಶ ಬಂದಿದೆ. ಗ್ರಾಮೀಣ ಪ್ರದೇಶಗಳಲ್ಲಿರುವಂಥ ಪಶು ಚಿಕಿತ್ಸಾಲಯದ ಡಾಕ್ಟರುಗಳಿಗೆ ಅಲ್ಲಿಯ ಜನರು ತಮ್ಮ ಪಶುಗಳಿಗೆ ಏನಾದರೂ ತೊಂದರೆ ಇದ್ದರೆ ಅದನ್ನು ದೂರವಾಣಿ ಮುಖಾಂತರ ದೂರು ಕೊಟ್ಟು ಸ್ಥಳಕ್ಕೆ ಡಾಕ್ಟರುಗಳನ್ನು ಕರೆಸುವ ಪದ್ಧತಿ ಇದೆ. ದೂರವಾಣಿಗಳನ್ನು ತಕ್ಷಣ ಬಂದ್ ಮಾಡಿಸಿದರೆ ಗ್ರಾಮೀಣ ಪ್ರದೇಶದಲ್ಲಿನ ರೈತರಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಪಶುಚಿಕಿತ್ಸಾಲಯದಲ್ಲಿರುವ ದೂರವಾಣಿ ವ್ಯವಸ್ಥೆಯನ್ನು ಮುಂದುವರಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೋರುತ್ತೇನೆ.

ಶ್ರೀ ಎ. ಕೃಷ್ಣಪ್ಪ :— ಮಾನ್ಯ ಅಧ್ಯಕ್ಷರೆ, ಜಿಲ್ಲಾ ಪಂಚಾಯತ್ ಮುಖೇನ ಕೊಡುವಂಥ ಪಶು ಔಷಧಿಗಳ ಕ್ವಾಂಟಿಟಿಯನ್ನು ಜಾಸ್ತಿ ಮಾಡಬೇಕೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ರೂರಲ್ ಸೆಕ್ಟಾರ್ ಅಕ್ಟಿವಿಟೀಸ್‌ನ್ನು ಪೂರ್ತಿಯಾಗಿ ಜಿಲ್ಲಾ ಪಂಚಾಯತ್ ಸುಪರ್ದಿಗೆ ಕೊಟ್ಟಿದ್ದೇವೆ. ಆಯಾಯ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಪಶು ಔಷಧಿಗಳ ಸಲುವಾಗಿ ಹಣವನ್ನು ಜಾಸ್ತಿ ಮಾಡಿಕೊಳ್ಳುವುದು ಬೇಡವೆಂದು ನಾವು ಯಾರೂ ಹೇಳಿಲ್ಲ. ರಾಜ್ಯದ 27 ಜಿಲ್ಲೆಗಳಲ್ಲಿ 22 ಜಿಲ್ಲೆಗಳಿಗೆ ನಾನು ಪ್ರವಾಸ ಕೈಗೊಂಡಿದ್ದಾಗ ಆಯಾಯಾ ಜಿಲ್ಲಾ ಪಂಚಾಯತಿಯ ಎಕ್ಸಿಕ್ಯೂಟೀವ್ ಆಫಿಸರ್ಸ್‌ಗೆ- 'ನಾವು ಕೊಡತಕ್ಕಂಥ ಅನುದಾನಗಳಲ್ಲಿ ರೂರಲ್ ಸೆಕ್ಟಾರ್‌ಗೆ ಜಾಸ್ತಿ ಹಣ ಕೊಡಬೇಕು, ಇದು ಬಹಳ ಮುಖ್ಯವಾದ ಇಲಾಖೆ' ಎಂದು ಹೇಳಿ ಅವರಿಗೆ ಆದೇಶ ಕೊಟ್ಟಿದ್ದೇವೆ. ಬೇಕಾದರೆ ಇನ್ನೊಂದು ಸುತ್ತೋಲೆಯನ್ನೂ ಸಹ ಕಳುಹಿಸುತ್ತೇವೆ. ಇನ್ನು ಪಶು ಚಿಕಿತ್ಸಾಲಯಗಳಲ್ಲಿರುವ ಟೆಲಿಫೋನ್ ಡಿಸ್‌ಕನೆಕ್ಷನ್ ವಿಚಾರ ನನ್ನ ಗಮನಕ್ಕೆ ಬಂದಿಲ್ಲ. ಟೆಲಿಫೋನ್ ಇರುವುದು ಜನರ ಸೌಕರ್ಯಕ್ಕಾಗಿ. ಟೆಲಿಫೋನ್ ಡಿಸ್‌ಕನೆಕ್ಷನ್ ಮಾಡುವಂಥ ಸಂದರ್ಭ ಏನಾದರೂ ಇದ್ದರೆ ಅದನ್ನು ರದ್ದುಮಾಡುತ್ತೇವೆಂದು ತಮ್ಮ ಮುಖೇನ ಮಾನ್ಯ ಸದಸ್ಯರಿಗೆ ಭರವಸೆಯನ್ನು ಕೊಡಬಯಸುತ್ತೇನೆ.

ಶಿವಮೊಗ್ಗದ ದೇವಿ ಸಕ್ಕರೆ ಕಾರ್ಖಾನೆ.

244 (2748) ಶ್ರೀ ಕರಿಯಣ್ಣ (ಹೊಳಹೊನ್ನೂರು) :— ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗದ ದೇವಿ ಸಕ್ಕರೆ ಕಾರ್ಖಾನೆ ಯಾವ ಹಂತದಲ್ಲಿದೆ; ಇದನ್ನು ಮತ್ತೆ ತೆರೆಯಲು ಆಗುವುದಿಲ್ಲವೇ; (ವಿವರ ನೀಡುವುದು)

ಆ) ಕಾರ್ಖಾನೆಯನ್ನು ಮತ್ತೆ ತೆರೆಯಲು ಆಗದಿದ್ದರೆ ರೈತರಿಗೆ ಅನುಕೂಲವಾಗಲು ಬೇರೆ ಸಕ್ಕರೆ ಕಾರ್ಖಾನೆ ತೆರೆಯಲು ಸರ್ಕಾರ ಕ್ರಮ ಕೈಗೊಳ್ಳುವುದೇ? (ವಿವರ ನೀಡುವುದು)

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :—

ಅ) ಶಿವಮೊಗ್ಗ ದೇವಿ ಸಕ್ಕರೆ ಕಾರ್ಖಾನೆಯಿಂದ ಬರಬೇಕಾದ ಬಾಕಿಗಾಗಿ ಚೆನ್ನೈ ಮೂಲದವರು ಚೆನ್ನೈ ಹೈಕೋರ್ಟಿನಲ್ಲಿ ದಾವೆ ಹೂಡಿದ್ದರಿಂದ, ಚೆನ್ನೈ ಹೈಕೋರ್ಟ್ ಸದರಿ ಕಾರ್ಖಾನೆಯನ್ನು ಸಮಾಪನೆಗೊಳಿಸಲು ಹಾಗೂ ಅದರ ಸಮಸ್ತ ವಹಿವಾಟನ್ನು ಚೆನ್ನೈ ಹೈಕೋರ್ಟ್‌ನಿಂದ ನೇಮಕವಾಗ ಆಫಿಶಿಯಲ್ ಲಿಕ್ವಿಡೇಟರ್‌ರವರ ವಶಕ್ಕೆ ನೀಡುವ ಆದೇಶ ಹೊರಡಿಸಿದ್ದರ ಮೇರೆಗೆ ಕಾರ್ಖಾನೆಯನ್ನು ಆಫಿಶಿಯಲ್ ಲಿಕ್ವಿಡೇಟರ್ ಅವರು ತಮ್ಮ ವಶಕ್ಕೆ ಪಡೆದು ಬೀಗ ಮುದ್ರೆ ಹಾಕಿರುತ್ತಾರೆ.